BANGALORE
THE IT CAPITAL OF INDIA

KEONICS
ISO 9001 : 2015

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
# Karnataka State Electronics Development Corporation Limited

(A Government of Karnataka Enterprise)
CIN No. U75112KA1976SGC003055)

ಸಂಖ್ಯೆ: ಕೆಎಸ್ಇಡಿಸಿ/ಇಎಸ್‌ಟಿ/ನೇ.ನೇ/01/2024-25 ದಿನಾಂಕ: 06.03.2025

**ಅಧಿಕೃತ ಜ್ಞಾಪನ**

**ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**
**(ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ)- ಕಲ್ಯಾಣ ಕರ್ನಾಟಕ ವೃಂದ)**

ಕಿಯೋನಿಕ್ಸ್ ಸಂಸ್ಥೆಯು, ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ 06 ವಿವಿಧ ಹುದ್ದೆಗಳಿಗೆ ಮತ್ತು ಉಳಿಕೆ ಮೂಲ ವೃಂದದ 10 ಹುದ್ದೆಗಳಿಗೆ, ನೇರ ನೇಮಕಾತಿ ಸಂಬಂಧ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ **ದಿನಾಂಕ:23.06.2023** ರಂದು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಕೆಕೆ)** ಮತ್ತು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಆರ್‌ಪಿಸಿ)** ಅಧಿಸೂಚನೆ ಹೊರಡಿಸಲಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಲಿಖಿತ ಪರೀಕ್ಷೆಯನ್ನು ನಡೆಸಿ ಅಭ್ಯರ್ಥಿಗಳು ಪಡೆದುಕೊಂಡ ಅಂಕಪಟ್ಟಿಯ ವಿವರಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ನೀಡಿರುತ್ತಾರೆ. ಸದರಿ ಅಂಕಪಟ್ಟಿಯನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ 1:3 ಅನುಪಾತದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅಭ್ಯರ್ಥಿಗಳಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ.

ದಾಖಲಾತಿ ಪರಿಶೀಲನೆಗೆ ಹಾಜರಾದ ಅರ್ಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ **ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು (15 ಹುದ್ದೆಗಳಿಗೆ) ದಿನಾಂಕ: 12.02.2025** ರಂದು ಕಿಯೋನಿಕ್ಸ್ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.

ಆದರೆ, **ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ)- ಕಲ್ಯಾಣ ಕರ್ನಾಟಕ ವೃಂದದ** ಹುದ್ದೆಗೆ ಸಂಬಂಧಪಟ್ಟಂತೆ, ದಾಖಲಾತಿ ಪರಿಶೀಲನೆಗೆ ಹಾಜರಾದ ಮೊದಲ 03 ಅಭ್ಯರ್ಥಿಗಳಲ್ಲಿ **ನಿಗದಿಪಡಿಸಿದ 05 ವರ್ಷದ ಅನುಭವ ಇಲ್ಲದಿರುವ ಕಾರಣ,** ಯಾವ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ, ಅರ್ಹತಾ ಪಟ್ಟಿಯಲ್ಲಿ 04 ನೇ ಅಭ್ಯರ್ಥಿಯವರಿಗೆ, ದಾಖಲಾತಿ ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿತ್ತು. ಅದರಂತೆ, ಅಭ್ಯರ್ಥಿಯು ದಾಖಲಾತಿ ಪರಿಶೀಲನೆಗೆ ಹಾಜರಾಗಿರುತ್ತಾರೆ ಹಾಗೂ **ನಿಗದಿಪಡಿಸಿದ 05 ವರ್ಷಗಳ ಅನುಭವವನ್ನು ಹೊಂದಿರುತ್ತಾರೆ**.



Scanned with OKEN Scanner

ಈ ಹಿನ್ನಲೆಯಲ್ಲಿ, **ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ)- ಕಲ್ಯಾಣ ಕರ್ನಾಟಕ ವೃಂದದ** ಹುದ್ದೆಗೆ ಕೆಳಗೆ ಕಾಣಿಸಿದಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುತ್ತಿದೆ.

**(ಕಲ್ಯಾಣ ಕರ್ನಾಟಕ ವೃಂದ)**

**<u>ಆಯ್ಕೆಯಾದ ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)</u>**

| ಕ್ರ. ಸಂ | ಹುದ್ದೆ | ಹೆಸರು | ನೋಂದಣಿ ಸಂಖ್ಯೆ | ಪ್ರವರ್ಗ/ ಪುರುಷ: ಮಹಿಳೆ | ಗಳಿಸಿದ ಅಂಕ |
|---|---|---|---|---|---|
| 1 | ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ) | KHAJA HUSAIN SAB | 7000121 | GM/2B | 140 |

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ), ಸಂಬಂಧ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ) ಪ್ರಕಟಿಸಿದ 07 ದಿನಗಳೊಳಗಾಗಿ ಕಿಯೋನಿಕ್ಸ್ ಸಂಸ್ಥೆಯ ನಿರ್ದೇಶಕರು (ನಿರ್ವಹಣೆ) ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

(ವ್ಯವಸ್ಥಾಪಕ ನಿರ್ದೇಶಕರಿಂದ ಹಾಗೂ
ಆಯ್ಕೆ ಸಮಿತಿಯಿಂದ ಅನುಮೋದಿಸಲ್ಪಟ್ಟಿದೆ)

Praveen 06/03/2025

( ಪ್ರವೀಣ್.ಕೆ.ಎನ್ )

ನಿರ್ದೇಶಕರು (ನಿರ್ವಹಣೆ) ಹಾಗೂ ಸದಸ್ಯ
ಕಾರ್ಯದರ್ಶಿಗಳು ಆಯ್ಕೆ ಸಮಿತಿ



Scanned with OKEN Scanner